ಮಾಸ್ತರು ಕುರ್ಚಿಯಲ್ಲಿ ಮತ್ತೂ ಚಾಚಿ ಕುಳಿತರು. ಪುರುಷೋತ್ತಮ ಎದ್ದು ಒಳಗಡೆ ಹೋದ. ಒಳಗಡೆ ಯಾರೂ ಇರಲಿಲ್ಲ. ಉಟ್ಟಿದ್ದ ಲುಂಗಿಯನ್ನು ಎತ್ತಿಕಟ್ಟಿ ಸಿಳ್ಳು ಹಾಕುತ್ತಾ ಆತ ಬಾವಿಕಟ್ಟೆಯ ಹತ್ತಿರಕ್ಕೆ ಹೋದ.

ಲಕ್ಷ್ಮಮ್ಮ ಬಾವಿಕಟ್ಟೆ ಹತ್ತಿರ ನಿಂತುಕೊಂಡು ಹಲ್ಲುಜ್ಜುತ್ತಿದ್ದರು.

"ಏನು ಮಗೂ!"

ಅವರು ಲೋಕಾಭಿರಾಮವಾಗಿ ವಿಚಾರಿಸಿದರು.

"ವಸಂತ ಇಲ್ಲವಾ?..."

"ಅವಳು ಸ್ನಾನ ಮಾಡುತ್ತಾ ಇರಬೇಕು..."

ಸ್ನಾನದಕೋಣೆಯ ಬಾಗಿಲು ಹಾಕಿರುವುದನ್ನು ಆತ ಆಗ ಗಮನಿಸಿದ. ಒಳಗಡೆ ನೀರು ಹೊಯ್ದು ಕೊಳ್ಳುತ್ತಿರುವುದರ ಶಬ್ದವನ್ನೂ ಕೇಳಿಸಿಕೊಂಡ.

ಓ! ವಸಂತ ಸ್ನಾನ ಮಾಡ್ತಾ ಇದ್ದಾಳೆ.

ಪುರುಷೋತ್ತಮನ ಮನಸ್ಸು ಯಾಕೋ ಏನೋ ಅಸ್ವಸ್ಥಗೊಂಡಿತು. ಅವನ ಮುಖದಲ್ಲಿರುತ್ತಿದ್ದ ಮಂದಹಾಸ, ಅವನನ್ನು ಎಂದಿಗೂ ಬಿಟ್ಟು ಹೋಗಲಾಗದ ಆ ಮುಖದ ಮಂದಹಾಸ ಅಳಿಸಿ ಹೋಗಿತ್ತು.

ಹಲ್ಲನ್ನು ಉಜ್ಜುತ್ತಲೇ ಲಕ್ಷ್ಮಮ್ಮ ಮಾತನಾಡುತ್ತಿದ್ದರು.

ಲಕ್ಷ್ಮಮ್ಮ ಮಾತನಾಡಿದ್ದು ಅವನಿಗೆ ಅರ್ಥವಾಗಲೂ ಇಲ್ಲ, ಅವರು ಜೋರಾಗಿ ನಕ್ಕಿದ್ದು ಅವನಿಗೆ ಕೇಳಿಸಲೂ ಇಲ್ಲ.

ಅವನು ಮುಚ್ಚಿದ್ದ ಬಾಗಿಲನ್ನು ನೋಡುತ್ತಲೇ ಇದ್ದ. ಎತ್ತಿ ಹೊಯ್ದುಕೊಳ್ಳುತ್ತಿದ್ದ ನೀರಿನ ಶಬ್ದಕ್ಕಾಗಿ ಏಕಾಗ್ರಚಿತ್ತನಾಗಿ ಕಿವಿಗೊಟ್ಟು ಕಾದು ನಿಂತಿದ್ದ.

ನೀರಿನ ಶಬ್ದ ನಿಂತಿತು. ಬಾಗಿಲು ತೆರೆಯಿತು.

ಬಿಡಿಸಿಕೊಂಡಿದ್ದ ಒದ್ದೆಯಾದ ತಲೆ ಕೂದಲು, ಕೈಯಲ್ಲಿ ಹಾಕಿಕೊಂಡಿದ್ದ ಕೆಂಪು ಗಾಜಿನ ಬಳೆಗಳು, ಕುತ್ತಿಗೆ, ಕೆನ್ನೆಗಳ ಮೇಲೆ ನೀರಿನ ಹನಿಗಳು.

ಆ ಒದ್ದೆಯಲ್ಲಿ ಅರಳಿದ ಆ ಮಂದಹಾಸ!

"ಯಾರೂ ಅಣ್ಣನಾ?..."

"ಅವನು ನಿನಗಾಗಿ ಕಾಯ್ತಾ ಇದಾನೆ..." ತಾಯಿ ಲಕ್ಷ್ಮಮ್ಮ ಹೇಳಿದರು.

"ಇದೋ ಬಂದುಬಿಟ್ಟೆ... ಆಯ್ತಾ?"

ವಸಂತ ಟವೆಲ್ಲು, ಸೋಪಿನ ಪೆಟ್ಟಿಗೆಯೊಂದಿಗೆ ಮನೆಯೊಳಕ್ಕೆ ಹೋದಳು.

ಆಗಲೇ ಆ ಸಂಗತಿ ಪುರುಷೋತ್ತಮನ ಗಮನಕ್ಕೆ ಬಂದಿದ್ದು: ಸ್ನಾನದ ಕೋಣೆಯಲ್ಲಿ, ಸೋಪಿನ ಮತ್ತು ತಲೆಗೆ ಹಚ್ಚುವ ಎಣ್ಣೆಯ ಸುಗಂಧದಿಂದ ಕೂಡಿದ ಸ್ನಾನದ ಕೋಣೆಯಲ್ಲಿ ಒಂದು ನೊಣ ಸುತ್ತಾ ಹಾರಾಡುತ್ತಿದೆ.

ಎಲ್ಲವನ್ನೂ ಕಾಣಲು ಸಾಧ್ಯವಿರುವ ಆ 'ನೊಣ!'

ಆ 'ನೊಣ'ದ ಮೇಲಿನ ಅಸೂಯೆಯಿಂದ ಅವನ ಹೊಟ್ಟೆಯಲ್ಲಿ ಬೆಂಕಿ ಹಾಕಿದಂತಾಯಿತು. ಅವನ ಎದೆಯಲ್ಲಿ ನಗಾರಿ ಬಾರಿಸಿತು. ಆತನ ಕೈಕಾಲುಗಳು ನಡುಗಿದವು. ಮುಖ ಕಾಗದದಂತೆ ಬಿಳಿಚಿಕೊಂಡಿತು.

ಎಂತಹ ಅದೃಷ್ಟಶಾಲಿಯಾದ 'ನೊಣ'. ಮಹಾ ಅದೃಷ್ಟ ಅಲ್ಲವೇ?

ಕೇವಲ ಮನುಷ್ಯನಾಗಿ ಯಾಕೆ ಈ ಪುರುಷೋತ್ತಮ ಜನಿಸಿದ?... ಓರ್ವ ರಾಜನಾಗಿ